INTERNATIONAL INDIAN SCHOOL, DAMMAM

SUMMATIVE ASSESSMENT– II MARCH 2014 -15

THIRD LANGUAGE – KANNADA

Marks 90

Class: VIII

Time: 3 Hrs.

General Instructions:

1. Carefully read the question before answering.
2. All questions must be numbered correctly as in the question paper.

---

1. ಅ) ಈ ಕೆಳಗಿನ ಹತ್ತು ಪದಗಳ ಅರ್ಥ ಬರೆಯಿರಿ: [½ X 10 = 5]

೧. ಶಶಿ  ೨. ಇರುಳು  ೩. ಕ್ರೀಡಾಪಟುಗಳು  ೪. ಅವಶೇಷ  ೫. ಅಂತರ  ೬. ಸಜ್ಜನರ ಸಹವಾಸ
೭. ಪತನ  ೮.ದನಗಣತಿ  ೯. ನಿಯಂತ್ರಣ  ೧೦. ಜರಿ  ೧೧. ಬಾಧಕ  ೧೨. ನಿಗದಿಪಡಿಸು

ಆ) ಈ ಕೆಳಗಿನ ಐದು ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ: [ 1 X 5 = 5]

೧. ಕೆಲಸ  ೨. ಸಂಚಾರ  ೩. ಕಟ್ಟು  ೪. ಪಂಡಿತ  ೫. ಪರಿಹಾಸ್ಯ  ೬. ಗುಟ್ಟು

ಇ) **ಹೊಂದಿಸಿ ಬರೆಯಿರಿ:** [ ½ X 10 = 5 ]

| | |
|---|---|
| ೧. ಸಕಲ ಶಾಸ್ತ್ರ | ಕೇತುಗಳು |
| ೨. ಗ್ರಹಣ | ನಿಮ್ಮ ಸಹಕಾರ |
| ೩. ವಿದ್ಯಾಬುದ್ಧಿ | ಕೆಲಸದಲಿ |
| ೪. ರಾಹು | ಒಂದು ನಗರ |
| ೫. ಜನಗಣತಿ | ಜಂಬುನಾಥ ಕಂಚ್ಯಾಣಿ |
| ೬. ಬೇಡುವೆನು | ಮಾತುಗಳು |
| ೭. ಗಿಣಿಗಳ | ಪುರಾಣಗಳು |
| ೮. ಪ್ರಥಮಸ್ಥಾನಕ್ಕೆ | ಕಲಿಯಲೇ ಬೇಕು |
| ೯. ಒಲಂಪಿಯಾ | ಚಿನ್ನದ ಪದಕ |
| ೧೦. ಸತ್ಯವಾದ | ಬೆಲೆಹೇಳು |

2. ಅ) ಸರಿಯಾದ ಪದ ಆರಿಸಿ ಬಿಟ್ಟ ಸ್ಥಳವನ್ನು ತುಂಬಿಸಿರಿ: [1 X 10 = 10]

೧. ಗ್ರಹಣದ ____________( ಗುಟ್ಟನು, ಜುಟ್ಟನು, ಸಿಟ್ಟನು )

೨. ____________ ಚಂದಿರರನು ( ಗವಿ, ಸವಿ, ರವಿ )

೩. ನನ್ನಷ್ಟು ಅನುಭವವು __________ ( ಇನ್ನಾರಿಗಿಲ್ಲ, ಇಲ್ಲ, ಇನ್ನಿಲ್ಲ )

೪. ಮತದಾರರ ತಲೆ _________ ಬಂದಿರುವೆನಲ್ಲ.( ಎಣಿಸಿ, ಉಣಿಸಿ, ತಣಿಸಿ )

೫. ಅಂಬಿಗ ಅವನೊಡನೆ ಮಾತು ____________ಲಿಲ್ಲ. ( ಬಳಸ, ಬೆಳೆಸ, ಬಾಳಿಸ )

೬. ನನ್ನನ್ನು ಮೂರ್ಖ ಎಂತಲೂ ______________ (ನಿಂದಿಸಿದಿರಿ, ವಂದಿಸಿದಿರಿ, ಕುಂದಿಸಿದಿರಿ )

೭. ಒಲಂಪಿಕ್ ಕ್ರೀಡಾಕೂಟಗಳು ______________ ವರ್ಷಗಳಿಗೊಮ್ಮೆ ನಡೆಯುತ್ತವೆ. ( ಮೂರು, ನಾಲ್ಕು, ಐದು)

೮. ವೈಯಕ್ತಿಕ ಕ್ರೀಡಾಸ್ಪರ್ಧೆಯಲ್ಲಿ ____________ ಜನ ಭಾಗವಹಿಸಬಹುದು.( ನಾಲ್ಕು, ಮೂರು, ಐದು )

೯. ನಾನು ನಾಲ್ಕು ದಿನ ಕಳೆದ ಮೇಲೆ __________ಗೆ ಬರುತ್ತೇನೆ. (ಅರಮನೆ, ಸೆರೆಮನೆ, ನೆರೆಮನೆ )

೧೦. ರಾಜನು ____________ದಾರಿ ಹಿಡಿದು ಸಾಗುತ್ತಿದ್ದ. ( ನಾಡು, ಕಾಡು, ಬೀಡು )

ಆ) ಈ ಸಾಲುಗಳನ್ನು ಸರಿಪಡಿಸಿ: ( 1 X 2 = 2 )

೧. ನನ್ನಿಂದ ಗುಟ್ಟು ರಟ್ಟಾಗದೆಂದಿಗೂ

ಇ) ಈ ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ: ( 1 X 2 = 2 )

೧. ಪಂಜರ  ೨. ಬಹುಮಾನ

ಈ) ಕೆಳಗಿನ ವಾಕ್ಯಗಳನ್ನು ಸರಿ/ತಪ್ಪು ಎಂದು ಗುರುತಿಸಿ ಬರೆಯಿರಿ: ( 1 X 3 = 3 )

೧. ಬೇಟೆಗಾರನ ಕೈಯಲ್ಲಿ ಮೂರು ಪಂಜರಗಳಿದ್ದವು.

೨. ಗ್ರಹಣದ ಗುಟ್ಟನು ಅರಿಯುವಿರೇನು?

೩. ನೀರೊಳು ಮುಳುಗಿ ಪಠಿಸುವರಿವರು.

3. ಅ) ಈ ಪದ್ಯಭಾಗವನ್ನು ಪೂರ್ತಿಗೊಳಿಸಿರಿ: (3 ½ marks)

ಹಲವಾರು ____________ ____________ ______________

__________ ________________ ____________ ______

____________ __________ __________ ______________

______________ ____________ ______________ ಮನೆಗೆ

ಆ) ಕವಿಯ ಹೆಸರು ________________ ( ½ marks)

ಇ) ಈ ಮಾತನ್ನು ಯಾರು ಯಾರಿಗೆ ಹೇಳಿದರು?

೧. "ಗಿಣಿಗಳ ಗುಣಕ್ಕೆ ತಕ್ಕಂತೆ ಬೆಲೆ ನಿಗದಿ ಮಾಡಿದ್ದೇನೆ" (1marks )

೨. "ಅದನ್ನೆಲ್ಲಾ ಓದಿದರ ಹೊಟ್ಟೆ ತುಂಬುವುದೇ ಸ್ವಾಮಿ" (1 ½ marks)

ಈ) ಗುಂಪಿಗೆ ಸೇರದ ಪದ ಬರೆಯಿರಿ: ( 1 X 3 = 3 )

೧. ಶಶಿ, ಸೋಮ, ಇಂದ್ರ ಚಂದ್ರ

೨. ಕಾಪಾಡು, ರಕ್ಷಿಸು, ಉಳಿಸು, ಶಿಕ್ಷಿಸು

೩. ಅವಿವೇಕ, ಅರಿವು, ಜ್ಞಾನ ತಿಳುವಳಿಕೆ

4. ಅ) ಬಿಟ್ಟ ಸ್ಥಳವನ್ನು ತುಂಬಿಸಿ: (½ X 4 = 2)

೧. ಶೀಲ + ವಂತ = ____________

೨. ಗುಣ + ________ = ಗುಣವಂತ

೩. ಜಾಣ + ವಂತ = ____________

೪. ________ + ವಂತ = ಬುದ್ಧಿವಂತ

ಆ) ಕನ್ನಡ ಸಂಖ್ಯೆ ಮತ್ತು ಸಂಖ್ಯಾನಾಮಗಳನ್ನು ಬರೆಯಿರಿ: ( 1 X 4 = 4 )

1) 24  2) 58  3) 100  4) 65

ಇ) ಈ ಪದಗಳ ಏಕವಚನ ರೂಪ ಬರೆಯಿರಿ: ( ½ X 3 = 1 ½ )

೧. ಸಂಖ್ಯೆಗಳು  ೨. ಆದೇಶಗಳು  ೩. ಬಾಲಕರು

5. ಅ) ಈ ಕೆಳಗಿನ ವಾಕ್ಯಗಳನ್ನು ಭವಿಷ್ಯತ್ ಕಾಲಕ್ಕೆ ಬದಲಾಯಿಸಿ: (1 X 2 = 2)

ಉದಾ: ಕಮಲ ಕಥೆ ಓದಿದಳು : ಕಮಲ ಕಥೆ ಓದಬಹುದು.

೧. ಭೀಮನು ನದಿಯಲ್ಲಿ ಈಜಿದನು.

೨. ಆ ಹುಡುಗರು ಆಟ ಆಡಿದರು.

ಆ) ಈ ವಾಕ್ಯಗಳ ಕಾಲವನ್ನು ಬರೆಯಿರಿ: ( 1 X 2 = 2 )

೧.ಮಕ್ಕಳು ಶಾಲೆಗೆ ಹೋಗುತ್ತಾರೆ.

೨. ಮೋಹನನು ಕ್ರಿಕೆಟ್ ಆಡುವನು.

ಇ) ಈ ಪದಗಳ ಕಾಲ ಬದಲಾಯಿಸಿ: ( ½ X 2= 1 )

೧. ಹೋಗುವನು      ೨. ಹುಡುಕುತ್ತಾರೆ

6. ಅ) ಈ ಕೆಳಗಿನ ಪದಗಳಿಗೆ ಪ್ರಥಮಾ ಮತ್ತು ಷಷ್ಠಿ ವಿಭಕ್ತಿ ಪ್ರತ್ಯಯ ಸೇರಿಸಿ ಬರೆಯಿರಿ: (1 X 2 = 2)

೧. ಕ್ರೀಡೆಗಳು      ೨.ಮರ

ಆ) ಬಿಟ್ಟ ಸ್ಥಳದಲ್ಲಿ ಸೂಕ್ತ ವಿಭಕ್ತಿ ಪ್ರತ್ಯಯ ಸೇರಿಸಿ ಬರೆಯಿರಿ: (1 X 2 = 2 )

೧. ಈ ಪುಸ್ತಕ _________ (            ) ಎಷ್ಟು ಚಿತ್ರಗಳಿವೆ?

೨. ಮೋಹನನು ಶಾಲೆ ______ (        ) ಹೊರಟನು.

ಇ) ಗೆರೆ ಎಳೆದಿರುವ ಪದಗಳ ವಿಭಕ್ತಿಯನ್ನು ಗುರುತಿಸಿ ಬರೆಯಿರಿ: ( 1 X 2 = 2 )

೧. ಗೋವಿಂದನು ಪುಸ್ತಕವನ್ನು ಕೊಂಡನು.

೨. ಇದು ರಮೇಶನ ಮನೆ.

7. ಅ) ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ: (1 X 10 = 10)

೧. ಜನಗಣತಿದಾರ ಎಷ್ಟು ದಿನಗಳ ಕಾಲ ಸಂಚಾರ ಮಾಡುತ್ತಾನೆ?

೨. ರಾಜನಿಗೆ ಯಾರು ಶಾಪ ಹಾಕಿದರು?

೩. ಜನಗಣತಿದಾರ ಎಷ್ಟು ಪ್ರಶ್ನೆಗಳನ್ನು ಕೇಳುತ್ತಾನೆ?

೪. ಸೂರ್ಯಗ್ರಹಣ ಹೇಗೆ ಉಂಟಾಗುತ್ತದೆ?

೫. ಒಲಂಪಿಕ್ ಕ್ರೀಡೆಗಳು ಎಷ್ಟು ವರ್ಷಗಳಿಗೊಮ್ಮೆ ನಡೆಯುತ್ತವೆ?

೬. ೧೯೬೪ ರ ಒಲಂಪಿಕ್ ಕ್ರೀಡೆಗಳು ಎಲ್ಲಿ ನಡೆದವು?

೭. ಪಂಡಿತನು ಪಕ್ಕದ ಊರಿಗೆ ಹೇಗೆ ಹೋಗಬೇಕಾಗಿತ್ತು?

೮. ಪಂಡಿತನ ಪ್ರಕಾರ ಮನುಷ್ಯ ಏನನ್ನು ಓದಬೇಕು?

೯. ರಾಜನಿಗೆ ಯಾರ ಮೇಲೆ ಪ್ರೀತಿ ಉಂಟಾಯಿತು?

೧೦. ರಾಹು ಕೇತುಗಳನ್ನು ಯಾರಿಗೆ ಹೋಲಿಸಲಾಗಿದೆ?

೧೧. ಎಡಗೈಯಲ್ಲಿದ್ದ ಗಿಣಿಯ ಬೆಲೆ ಎಷ್ಟು ರೂಪಾಯಿ?

೧೨. ಮಕ್ಕಳು ಏನನ್ನು ಅರಿಯಬೇಕು?

ಆ) ಈ ಕೆಳಗಿನವುಗಳಲ್ಲಿ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ: (2½ x 4 =10 )

೧. ಒಂದು ಗಿಣಿಯಲ್ಲಿ ಕೆಟ್ಟಗುಣ ಒಂದು ಗಿಣಿಯಲ್ಲಿ ಒಳ್ಳೆಯ ಗುಣ ಬರಲು ಕಾರಣವೇನು?

೨. ೧೯೬೪ ರಲ್ಲಿ ನಡೆದ ಒಲಂಪಿಕ್ ಕ್ರೀಡಾಕೂಟ ಹೇಗಿತ್ತು? ವಿವರಿಸಿರಿ.

೩. ನದಿಯಲ್ಲಿ ಇದ್ದಕ್ಕಿದ್ದಂತೆ ಏನು ಸಂಭವಿಸಿತು?

೪. ಒಲಂಪಿಕ್ ಜ್ಯೋತಿ ಬೆಳಗುವುದನ್ನು ಯಾವಾಗಿನಿಂದ ಮತ್ತು ಎಲ್ಲಿಂದ ಪ್ರಾರಂಭಿಸಲಾಯಿತು?

೫. ಐನೂರು ರೂಪಾಯಿ ಬೆಲೆಯ ಗಿಣಿಯು ರಾಜನನ್ನು ಏನೆಂದು ಹಾರೈಸಿತು?

೬. ಒಲಂಪಿಕ್ ಕ್ರೀಡಾ ಸ್ಪರ್ಧೆಗಳನ್ನು ಎಲ್ಲಿ ಏರ್ಪಡಿಸುತ್ತಾರೆ?

೮. ಈ ಕೆಳಗಿನ ಗದ್ಯಭಾಗವನ್ನು ಓದಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:

ಕನ್ನಡ ರಾಜ್ಯೋತ್ಸವ ಅಥವಾ ಕರ್ನಾಟಕ ರಾಜ್ಯೋತ್ಸವ ಪ್ರತಿ ವರ್ಷದ ನವೆಂಬರ್ ೧ ರಂದು ಆಚರಿಸಲಾಗುತ್ತದೆ. ಮೈಸೂರು ರಾಜ್ಯವು(ಈಗಿನ ಕರ್ನಾಟಕ) ೧೯೫೬ರ ನವೆಂಬರ್ ೧ರಂದು ನಿರ್ಮಾಣವಾದುದರ ಸಂಕೇತವಾಗಿ ಈ ರಾಜ್ಯೋತ್ಸವವನ್ನು ಆಚರಿಸಲಾಗುತ್ತದೆ. ದಕ್ಷಿಣ ಭಾರತದ ಎಲ್ಲಾ ಕನ್ನಡ ಭಾಷೆ-ಮಾತನಾಡುವ ಪ್ರದೇಶಗಳನ್ನು ವಿಲೀನಗೊಳಿಸಿ ಒಂದು ರಾಜ್ಯವನ್ನು ಘೋಷಣೆ ಮಾಡಿದ ಈ ದಿನವನ್ನು ಕನ್ನಡಿಗರು ನಾಡ ಹಬ್ಬವನ್ನಾಗಿ ಆಚರಿಸುತ್ತಾರೆ.

ಕನ್ನಡದ ಕುಲಪುರೋಹಿತರಾದ ಆಲೂರು ವೆಂಕಟರಾವ್, ಕರ್ನಾಟಕ ಏಕೀಕರಣ ಚಳುವಳಿಯನ್ನು ೧೯೦೫ ರಲ್ಲಿ ಪ್ರಾರಂಭಿಸಿದರು. ೧೯೫೦ರಲ್ಲಿ, ಭಾರತವು ಗಣರಾಜ್ಯವಾದ ನಂತರ ಭಾರತದ ವಿವಿಧ ಪ್ರಾಂತ್ಯಗಳು, ಭಾಷೆಗಳ ಆಧಾರದ ಮೇಲೆ ರಾಜ್ಯಗಳಾಗಿ ರೂಪುಗೊಂಡವು. ಈ ಹಿಂದೆ ರಾಜರ ಆಳ್ವಿಕೆಯಲ್ಲಿ ದಕ್ಷಿಣ ಭಾರತದಲ್ಲಿ ಹಲವಾರು ಸಂಸ್ಥಾನಗಳನ್ನು ಒಳಗೊಂಡಂತೆ ರಾಜ್ಯಗಳು ರೂಪುಗೊಂಡಿದ್ದವು. ಕನ್ನಡ ಮಾತನಾಡುವ ಪ್ರಾಂತ್ಯಗಳು ಸೇರಿ, ಮೈಸೂರು ರಾಜ್ಯವು ಉದಯವಾಯಿತು.

೧೯೫೬ ರ ನವೆಂಬರ್ ೧ ರಂದು, ಮದ್ರಾಸ್, ಬಾಂಬೆ, ಹೈದರಬಾದ್ ಪ್ರಾಂತ್ಯದ ಕನ್ನಡ ಮಾತನಾಡುವ ಪ್ರದೇಶಗಳು ವಿಲೀನಗೊಂಡು ಮೈಸೂರು ರಾಜ್ಯ ಉದಯವಾಯಿತು ಹಾಗೂ ಉತ್ತರ ಕರ್ನಾಟಕ, ಮಲೆನಾಡು ಮತ್ತು ಹಳೆಯ ಮೈಸೂರು ಎಂಬುದಾಗಿ ಹೊಸದಾಗಿ ರೂಪುಗೊಂಡ ಮೈಸೂರು ರಾಜ್ಯವನ್ನು ಮೂರು ಪ್ರದೇಶಗಳಲ್ಲಿ ಗುರುತಿಸಲಾಯಿತು.

ಆದರೆ ಉತ್ತರ ಕರ್ನಾಟಕದ ಜನರ ತರ್ಕ ಮಾನ್ಯತೆಗಾಗಿ, ರಾಜ್ಯದ ಹೆಸರು ನವೆಂಬರ್ ೧, ೧೯೭೩ ರಂದು "ಕರ್ನಾಟಕ" ಎಂದು ಬದಲಾಯಿತು. ಈ ಸಂದರ್ಭದಲ್ಲಿ ದೇವರಾಜ ಅರಸ್ ರಾಜ್ಯದ ಮುಖ್ಯಮಂತ್ರಿಯಾಗಿದ್ದರು.

ಕರ್ನಾಟಕ ಏಕೀಕರಣದ ಮನ್ನಣೆ ಇತರ ವ್ಯಕ್ತಿಗಳಿಗೂ ಸೇರುತ್ತದೆ. ಅವರೆಂದರೆ ಅನಕೃ, ಕೆ. ಶಿವರಾಮ್ ಕಾರಂತ, ಕುವೆಂಪು, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಎ.ಎನ್. ಕೃಷ್ಣರಾವ್ ಮತ್ತು ಬಿ.ಎಂ. ಶ್ರೀಕಂಠಯ್ಯ ಮುಂತಾದವರು. ನವೆಂಬರ್ ೧೧ ರಂದು ಅಧಿಕೃತವಾಗಿ ಕನ್ನಡ ರಾಜ್ಯೋತ್ಸವವು ಆಚರಣೆಯಾದರೂ, ನವೆಂಬರ್ ತಿಂಗಳ ಮೊದಲ ದಿನ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಗುತ್ತದೆ. ನವೆಂಬರ್ ೧ ಸಾರ್ವಜನಿಕ ರಜೆ ಇರುತ್ತದೆ. ಈ ದಿನಗಳಲ್ಲಿ ಕನ್ನಡ ಬಾವುಟ ಸರ್ಕಾರದ ಪ್ರಮುಖ ಕಛೇರಿಯ ಮೇಲೆ ಎಲ್ಲೆಲ್ಲಿಯು ಹಾರಾಡುತ್ತಿರುತ್ತದೆ. ರಾಜ್ಯೋತ್ಸವವನ್ನು ಕರ್ನಾಟಕದಲ್ಲಿರುವ ಬಹುತೇಕ ಹಿಂದೂಗಳು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಧರ್ಮಬೇಧವಿಲ್ಲದೆ ಆಚರಿಸುತ್ತಾರೆ ಹಾಗೂ ಸರ್ಕಾರ ಮೆರವಣಿಗೆ ಆಟೋ ರಿಕ್ಷಾಗಳು ಮತ್ತು ಇತರೆ ವಾಹನಗಳು ಕನ್ನಡ ಧ್ವಜದ ಬಣ್ಣಗಳಾದ ಕೆಂಪು ಮತ್ತು ಹಳದಿ ವರ್ಣಗಳ ಬಾವುಟದೊಂದಿಗೆ ಅಲಂಕರಿಸಲಾಗಿರುತ್ತವೆ.

ರಾಜ್ಯ ಸರ್ಕಾರ ಕರ್ನಾಟಕ ರಾಜ್ಯೋತ್ಸವದ ದಿನ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರಿಗೆ ಪ್ರಶಸ್ತಿ ಪ್ರಕಟ ಪಡಿಸುತ್ತದೆ. ರಾಜ್ಯೋತ್ಸವದ ಪ್ರಯುಕ್ತ ಕರ್ನಾಟಕ ಸರ್ಕಾರದ ವತಿಯಿಂದ ರಾಜ್ಯೋತ್ಸವ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ. ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವಿಶ್ವದಾದ್ಯಂತ ಹಮ್ಮಿಕೊಳ್ಳಲಾಗುತ್ತದೆ. ರಾಜ್ಯದ ಮುಖ್ಯಮಂತ್ರಿ ಸಾಧಕರಿಗೆ ಈ ಪ್ರಶಸ್ತಿಯನ್ನು ವಿತರಿಸುತ್ತಾರೆ.

**ಪ್ರಶ್ನೆಗಳು: (10 marks)**

೧. ಕನ್ನಡ ರಾಜ್ಯೋತ್ಸವ ಯಾವಾಗ ಆಚರಿಸಲಾಗುತ್ತದೆ?

೨. ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ಯಾರು ನೀಡುತ್ತಾರೆ?

೩. ಯಾವ ಸರ್ಕಾರ ಕನ್ನಡ ರಾಜ್ಯೋತ್ಸವ ದಿನದಂದು ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರಿಗೆ ಪ್ರಶಸ್ತಿ ಪ್ರಕಟ ಪಡಿಸುತ್ತದೆ?

೪. ಈ ದಿನವನ್ನು ಕನ್ನಡಿಗರು ____________ವನ್ನಾಗಿ ಆಚರಿಸುತ್ತಾರೆ.

೫. ಕರ್ನಾಟಕ ರಾಜ್ಯದ ಬಾವುಟದಲ್ಲಿ ಎಷ್ಟು ಬಣ್ಣಗಳಿವೆ?

೬. ಕರ್ನಾಟಕದ ಮುಖ್ಯಮಂತ್ರಿ ____________ ( ಸಿದ್ಧರಾಮಯ್ಯ, ಜಗದೀಶ್ ಶೆಟ್ಟರ್ )

೭. ರಾಜ್ಯದ ಹೆಸರು ಕರ್ನಾಟಕ ಎಂದು ಯಾವಾಗ ಬದಲಾಯಿತು?

೮. ರಾಜ್ಯದ ಹೆಸರು 'ಕರ್ನಾಟಕ' ಆದ ಸಂದರ್ಭದಲ್ಲಿ ಯಾರು ಮುಖ್ಯಮಂತ್ರಿಯಾಗಿದ್ದರು?

೯. ರಾಜ್ಯದ ಮುಖ್ಯಮಂತ್ರಿ ಸಾಧಕರಿಗೆ ________ ನೀಡುತ್ತಾರೆ.

೧೦. ಕರ್ನಾಟಕ ಏಕೀಕರಣ ಚಳುವಳಿಯನ್ನು ೧೯೦೫ ರಲ್ಲಿ ಯಾರು ಪ್ರಾರಂಭಿಸಿದರು?